ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ 29ನೇ ಫೆಬ್ರವರಿ 1996 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ.

91 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೋಸ್ಕರ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?*

ಆ) *ಈ ಪಂಗಡಗಳ ಅಭಿವೃದ್ಧಿ ಕಾರ್ಯಕ್ರಮಗಳ ಅನ್ವಯ ರಾಜ್ಯದಲ್ಲಿ ಎಷ್ಟು ಅಂಬೇಡ್ಕರ್ ಭವನಗಳಿಗೆ ಹಾಗೂ ಎಷ್ಟು ನೂತನ ಭವನಗಳಿಗೆ ಪರವಾನಗಿ ನೀಡಲಾಗಿದೆ?*

ಇ) *ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಿಸುವ ವಿಚಾರ ಸರ್ಕಾರದ ಮುಂದಿದೆಯೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲಾಗುತ್ತಿದೆ. ಈ ಯೋಜನೆಗಳಲ್ಲಿ ವಿದ್ಯಾಭ್ಯಾಸದ ಪ್ರಗತಿಗಾಗಿ ಹೆಚ್ಚಿನ ಮಹತ್ವ ನೀಡಲಾಗಿದೆ. ಇಲಾಖೆಯಿಂದ ಸುಮಾರು 950 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು, 117 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು, 295 ಅನುದಾನಿತ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಇದಲ್ಲದೇ 88 ವಸತಿ ಶಾಲೆಗಳನ್ನು, 79 ಆಶ್ರಮ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. ವಿಭಾಗಮಟ್ಟದಲ್ಲಿ 4 ನವೋದಯ ಶಾಲೆಗಳನ್ನು ಸಹ ನಿರ್ವಹಿಸಲಾಗುತ್ತಿದೆ. ಅದರಂತೆ 765 ಮಕ್ಕಳ

ಕಲ್ಯಾಣ ಕೇಂದ್ರಗಳನ್ನು 1 ರಿಂದ 4ನೇ ತರಗತಿಯಲ್ಲಿ ಓದುತ್ತಿರುವ ಸುಮಾರು 10.45 ಲಕ್ಷ ಮಕ್ಕಳಿಗೆ ಪ್ರೋತ್ಸಾಹಧನ, ಮೆಟ್ರಿಕ್ ಪೂರ್ವ 5.00 ಲಕ್ಷ, ಮೆಟ್ರಿಕ್ ನಂತರದ 1.58 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಸ್ನಾತಕೋತ್ತರ ಪದವಿಯನ್ನು ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

ಸ್ವಯಂ ಉದ್ಯೋಗಕ್ಕೆ ನೆರವಾಗುವಂತೆ ಹೊಲಿಗೆ ತರಬೇತಿ, ಶೀಘ್ರಲಿಪಿ, ಬೆರಳಚ್ಚು ಎಲೆಕ್ಟ್ರಾನಿಕ್ಸ್, ಕಾನೂನು ಪದವೀಧರರಿಗೆ ಶಿಷ್ಯ ವೇತನ, ಪರೀಕ್ಷಾಪೂರ್ವ ತರಬೇತಿ ಕೇಂದ್ರಗಳಲ್ಲಿ ಬ್ಯಾಂಕಿಂಗ್ ಸೇವೆ, ರೈಲ್ವೆ ಇಲಾಖೆಯಲ್ಲಿ ನೇಮಕಾತಿ ಹೊಂದಲು ಪೂರ್ವ ತರಬೇತಿಯನ್ನು ಸಹ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸುಮಾರು 70 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸುವುದಲ್ಲದೇ, ನಿರ್ಮಾಣ ಹಂತದಲ್ಲಿರುವ ಎಲ್ಲಾ 184 ವಿದ್ಯಾರ್ಥಿ ನಿಲಯಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ವಿಶೇಷ ಘಟಕ ಯೋಜನೆಯಡಿಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ 330.00 ಕೋಟಿ ರೂ.ಗಳ ವೆಚ್ಚದಲ್ಲಿ 1,75,000 ಸೌಲಭ್ಯ ಫಲಾನುಭವಿಗಳಿಗೆ ಆರ್ಥಿಕ ನೆರವು ಹಾಗೂ ಸೌಲಭ್ಯ ನೀಡಲಾಗುತ್ತಿದೆ. ಪ್ರತಿ ವರ್ಷ ಅಂಬೇಡ್ಕರ್ ಯೋಜನೆಯಡಿ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿ ಮನೆಗೆ 20,000.00 ರೂ.ಗಳಂತೆ ಒಟ್ಟು 25,000 ಮನೆಗಳನ್ನು ಮಾಡಲಾಗುತ್ತಿದೆ. ವಿಶೇಷ ಘಟಕ ಯೋಜನೆಯಲ್ಲಿ ಕ್ರೋಢಿಕೃತ ಹಣದಲ್ಲಿ ವಿದ್ಯಾರ್ಥಿ ನಿಲಯಗಳ ನಿರ್ಮಾಣ, ಅಂಬೇಡ್ಕರ್ ಭವನಗಳ ನಿರ್ಮಾಣ, ದೇವದಾಸಿಯರ ಪುನರ್‌ವಸತಿ, ಭೂ ಖರೀದಿ ಹಾಗೂ ಇತರೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಗಿರಿಜನ ಉಪಯೋಜನೆಯಡಿಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ 36,000 ಫಲಾನುಭವಿಗಳಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಅಂಬೇಡ್ಕರ್ ವಸತಿ ಯೋಜನೆಯ ಮಾದರಿಯಲ್ಲಿಯೇ ಗಿರಿಜನರಿಗೂ ಮನೆಗಳನ್ನು ಕಟ್ಟಿಸಿಕೊಡಲಾಗುವುದು.

ಡಾ॥ ಬಿ.ಆರ್. ಅಂಬೇಡ್ಕರ್ ಯೋಜನೆಯಡಿಯಲ್ಲಿ 25,000 ಮನೆ, ಆಶ್ರಯ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿನ ಮನೆಗಳಿಗೆ ವಿಶೇಷ ಘಟಕ ಯೋಜನೆಯಲ್ಲಿ ಕ್ರೋಢೀಕೃತಗೊಳಿಸಿದ ಹಣದಿಂದ ಪ್ರತಿ ಮನೆಗೆ 10,000 ಮತ್ತು 5,000 ರೂ. ಧನ ಸಹಾಯವನ್ನು ಭರಿಸಲಾಗುವುದು.

ಒಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಕಾರ್ಯಗತಗೊಳಿಸುತ್ತಿರುವ ಎಲ್ಲಾ ಯೋಜನೆಗಳಲ್ಲದೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಎಲ್ಲ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅಂಬೇಡ್ಕರ್ ಭವನಗಳ ನಿರ್ಮಾಣವು ಒಂದು ಯೋಜನೆಯಾಗಿರುತ್ತದೆ. ರಾಜ್ಯಮಟ್ಟದಲ್ಲಿ ಬೆಂಗಳೂರು (ನಗರ)ದ ಮಿಲ್ಲರ್ ರಸ್ತೆಯಲ್ಲಿ 6.50 ಕೋಟಿ ರೂ.ಗಳ ವೆಚ್ಚದಲ್ಲಿ ಅಂಬೇಡ್ಕರ್ ಭವನ ನಿರ್ಮಾಣವಾಗುತ್ತಿದ್ದು. ಎರಡನೇ ಹಂತದ ಕೆಲಸ ಪ್ರಗತಿಯಲ್ಲಿರುತ್ತದೆ. ಇದಲ್ಲದೆ ರಾಜ್ಯದ 7 ಜಿಲ್ಲಾ ಕೇಂದ್ರಗಳಾದ ಕೋಲಾರ, ವಿಜಾಪುರ, ತುಮಕೂರು, ಮಂಗಳೂರು, ಹಾಸನ, ರಾಯಚೂರು, ಕಾರವಾರಗಳಲ್ಲಿ ಅಂಬೇಡ್ಕರ್ ಭವನಗಳನ್ನು ನಿರ್ಮಾಣಮಾಡಲು ಆದೇಶ ನೀಡಿರುತ್ತದೆ. 22-12-95 ರಲ್ಲಿ ಮಂಜೂರಾತಿ ನೀಡಿ ವಿವಿಧ ಸ್ಥಳಗಳಲ್ಲಿ ಮಿನಿ ಅಂಬೇಡ್ಕರ್ ಭವನಗಳನ್ನು ಪ್ರತಿ ಒಂದು ಭವನಕ್ಕೆ 3.00 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ಸರ್ಕಾರವು ದಿನಾಂಕ 29-12-95ರಲ್ಲಿ ಮಂಜೂರಾತಿ ನೀಡಿ ಆದೇಶವಿತ್ತಿರುತ್ತದೆ.

ಇ) ಈಗಾಗಲೇ ಸರ್ಕಾರವು ಮಂಜೂರಾತಿ ನೀಡಿರುವ 120 ಸ್ಥಳಗಳಲ್ಲಿ ಉಳ್ಳಾಲ ವಿಧಾನ ಸಭಾ ಕ್ಷೇತ್ರವು ಸೇರಿರುವುದಿಲ್ಲ. ಸದರಿ ಸ್ಥಳದಲ್ಲಿ ಅಂಬೇಡ್ಕರ್ ಭವನ ನಿರ್ಮಿಸುವ ಕುರಿತು ಪರಿಶೀಲಿಸಲಾಗುವುದು.

ಅನುಬಂಧ - ಆ

ಸಮಾಜ ಕಲ್ಯಾಣ ಇಲಾಖೆಯಲ್ಲಿ ಯೋಜನೆ ಮತ್ತು ಯೋಜನೇತರ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಈ ಕೆಳಗೆ ನಮೂದಿಸಿರುವ ಕಾರ್ಯಕ್ರಮಗಳನ್ನು ರಾಜ್ಯ ಮತ್ತು ಜಿಲ್ಲಾ ವಲಯಗಳಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ :

1) ರಾಜ್ಯ ವಲಯ (ಕೇಂದ್ರ ಪುರಸ್ಕೃತ ಯೋಜನೆಗಳು)

1. ತರಬೇತಿ ಹಾಗೂ ಸಂಬಂಧಪಟ್ಟ ಯೋಜನೆಗಳು (ಡಿ.ಇ.ಟಿ.ಸಿ)
2. ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ
3. ಅಂತರ್ಜಾತಿ ವಿವಾದಗಳು
4. ಪ್ರಚಾರಕ್ಕಾಗಿ ಪ್ರಚಾರ ವಿಭಾಗದ ಸ್ಥಾಪನೆ
5. ಅಸ್ಪೃಶ್ಯತಾ ನಿವಾರಣೆಯ ಸಪ್ತಾಹದ ಆಚರಣೆ
6. ಸೆಮಿನಾರುಗಳು ಮತ್ತು ಕಮ್ಮಟಗಳನ್ನು ನಡೆಸುವುದು
7. ದೌರ್ಜನ್ಯಕ್ಕೊಳಪಟ್ಟ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗಾಗಿ ಪರಿಹಾರ
8. ಗಿರಿಜನ ಉಪಯೋಜನೆ.
9. ಸಂಶೋಧನೆ ಮತ್ತು ತರಬೇತಿ

2) ಜಿಲ್ಲಾ ವಲಯ (ಕೇಂದ್ರ ಪುರಸ್ಕೃತ ಯೋಜನೆಗಳು)

10. ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗೆ ವಿದ್ಯಾರ್ಥಿವೇತನ
11. ಅಸ್ಪೃಶ್ಯತಾ ನಿವಾರಣೆ
12. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಪುಸ್ತಕ ಭಂಡಾರ
13. ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಬಾಲಕಿಯರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳನ್ನು ಕಟ್ಟುವುದು.
14. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾಲೇಜು ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ನೀಡುವುದು.

ರಾಜ್ಯವಲಯ

1) ನಿರ್ದೇಶನ ಮತ್ತು ಆಡಳಿತ.
2) ಎಲೆಕ್ಟ್ರಾನಿಕ್ ಮತ್ತು ಕಂಪ್ಯೂಟರ್ ತರಬೇತಿ
3) ಡಾ|| ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ರೂಪಿಸಿರುವ ವಿಶೇಷ ಕಾರ್ಯಕ್ರಮಗಳು
4) ನವೋದಯ ಶಾಲೆಗಳ ಸುಧಾರಣೆ
5) ವಸತಿ ಶಾಲೆಗಳ ಕಟ್ಟಡ ನಿರ್ಮಾಣ
6) ಐ.ಎ.ಎಸ್. ತರಬೇತಿ ಸಂಸ್ಥೆ
7) ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರ ಕುಟುಂಬಗಳ ಸಮೀಕ್ಷೆ.
8) ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ಹೊಸದು)
9) ಡಾ|| ಬಿ.ಆರ್. ಅಂಬೇಡ್ಕರ್ ರವರ ಜನ್ಮ ದಿನಾಚರಣೆ
10) ಕಾನೂನು ಪದವೀಧರರಿಗೆ ಶಿಷ್ಯವೇತನ
11) ಸ್ವಯಂ ಸೇವಾ ಸಂಸ್ಥೆಗಳಿಗೆ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಧನಸಹಾಯ
12) ರಾಮಕೃಷ್ಣಾಶ್ರಮಕ್ಕೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಸೇರಿಸುವುದು.
13) ಸಾರ್ವಜನಿಕ ಉದ್ದಿಮೆಗಳಲ್ಲಿ ಯುವಕರಿಗೆ ತರಬೇತಿ
14) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
15) ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಧನಸಹಾಯ
16) ವಸತಿ ಶಾಲೆಗಳು : ಆಶ್ರಯ ಶಾಲೆಗಳು
17) ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳು

18) ಡಾ|| ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ

19) ವಿದ್ಯಾರ್ಥಿನಿಲಯಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಒದಗಿಸುವುದು

20) ಐ.ವಿ.ಎಂ. ಐ.ಎ.ಎನ್.ಸಿ. ಮತ್ತು ಐ.ಟಿ.ಐ. ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನ ವೆಚ್ಚ

21) ಹೊಸ ನವೋದಯ ಶಾಲೆಗಳನ್ನು ತೆರೆಯುವುದು

22) ರ್ಯಾಂಕ್ ವಿಜೇತರಿಗೆ ಪುರಸ್ಕಾರ ಹಣ.

23) ಎಂ.ಫಿಲ್ ಮತ್ತು ಫಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಫೆಲೋಷಿಪ್

24) ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

25) ತಾಂತ್ರಿಕ ವಿದ್ಯಾರ್ಥಿಗಳಿಗೆ ಉಪಕರಣಗಳು

26) ಮಾದರಿ ಸಂಘಟಿತ ನಿವಾಸಿ ಪ್ರಾಥಮಿಕ ಶಾಲೆಗಳು

27) ಸಮುದಾಯ ನೀರಾವರಿ ಯೋಜನೆಗಳು

28) ನಿರ್ದೇಶನ ಮತ್ತು ಆಡಳಿತ (ಗಿರಿಜನ)

29) ಪರಿಶಿಷ್ಟ ವರ್ಗದವರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು

ಜಿಲ್ಲಾ ವಲಯ

1. ನಿರ್ದೇಶನ ಮತ್ತು ಆಡಳಿತ
2. ಹೊಲಿಗೆ ಯಂತ್ರಗಳ ಸರಬರಾಜು
3. ಕಾನೂನು ಪದವೀಧರಿಗೆ ಸಹಾಯಧನ
4. ಕಟ್ಟಡಗಳ ದುರಸ್ತಿ
5. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳವರಿಗೆ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ
6. ಸೇರ್ಪಡೆ ಮತ್ತು ಮಾರ್ಪಾಡುಗಳು
7. ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಣ
8. ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ ಹಣ
9. ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ನೆರವು
10. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
11. ಪ್ರತಿಭಾ ವಿದ್ಯಾರ್ಥಿ ವೇತನಗಳ ನೀಡಿಕೆ
12. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳ ನೀಡಿಕೆ
13. ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ

14. ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳು
15. ನಿವಾಸಿ ಶಾಲೆಗಳು : ಆಶ್ರಮ ಶಾಲೆಗಳು
16. ಐ.ಟಿ.ಐ. ಮತ್ತು ಐ.ಟಿ.ಸಿ.ಗಳಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ
17. ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳು
18. ಅಧ್ಯಯನ ಪ್ರವಾಸ ವೆಚ್ಚಗಳು
19. ಹೆಣ್ಣು ಮಕ್ಕಳಿಗೆ ಟಿ.ಸಿ.ಹೆಚ್. ತರಬೇತಿ
20. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳ ಸರಬರಾಜು
21. 1 ರಿಂದ 4ನೇ ತರಗತಿಗೆ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
22. ನವೋದಯ ಶಾಲೆಗಳು
23. ಗೃಹ ನಿರ್ಮಾಣಕ್ಕಾಗಿ ಸಹಾಯಧನ
24. ಪರಿಶಿಷ್ಟ ಜಾತಿಯವರ ಮನೆಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು
25. ಅನಿವಾಸಿಗಳು

ಅನುಬಂಧ - ಆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಏಳಿಗೆಗಾಗಿ ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಕಾರ್ಯಗತಗೊಳಿಸುತ್ತಿರುವ ವಿವಿಧ ಯೋಜನೆಗಳ ವಿವರ ಈ ಕೆಳಕಂಡಂತಿದೆ :

1) ಭೂ ಒಡೆತನ ಯೋಜನೆ
2) ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ
3) ಸ್ವಯಂ ಉದ್ಯೋಗ ಯೋಜನೆ
4) ತರಬೇತಿ ಯೋಜನೆ
5) ದೇವದಾಸಿ ಪುನರ್ವಸತಿ ಕಲ್ಪಿಸುವ ಯೋಜನೆ
6) ಟಿ.ಎಸ್ ಬಿ ಯೋಜನೆ
7) ತೋಟಗಾರಿಕೆಯಲ್ಲಿ ಸಣ್ಣ ರೈತರಿಗೆ ನೆರವು ಯೋಜನೆ
8) ಬೀಡಿ ಮಾರಾಟಗಾರರಿಗೆ ನೆರವು
9) ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ
10) ಗಂಗಾ ಕಲ್ಯಾಣ ಯೋಜನೆ.

ಶ್ರೀ ಕೆ. ಜಯರಾಮ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಸ್ನಾತಕೋತ್ತರ ಪದವಿಯಲ್ಲಿ ಸಂಶೋಧನೆ ಮಾಡುತ್ತಿರುವವರಿಗೆ ಮಂಜೂರು ಮಾಡಲಾಗುತ್ತಿದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. ರಾಜ್ಯದಲ್ಲಿ ಇಷ್ಟವರೆಗೆ ಎಷ್ಟು ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನವನ್ನು ಒದಗಿಸಿಕೊಟ್ಟಿದ್ದಾರೆ? ಹಾಗೂ ವಿಶೇಷ ಘಟಕ ಯೋಜನೆಯಡಿಯಲ್ಲಿ ಮನೆ ನಿರ್ಮಿಸುವ ಸಂದರ್ಭದಲ್ಲಿ ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಫಲಾನುಭವಿಗಳು ವಂಚನೆಗೊಳಗಾಗಿದ್ದಾರೆ. ಸರ್ಕಾರಿ ಅಧಿಕಾರಿಗಳ ಉಪಯೋಗದಿಂದ ಮನೆಗಳನ್ನು ಕಟ್ಟಿಸುತ್ತೇವೆಂದು ಸರ್ಕಾರದಿಂದ ಅನುಮೋದನೆ ಪಡೆದುಕೊಂಡು ಮನೆಯನ್ನು ಕಟ್ಟಿಸದೆಯೇ ಹಣವನ್ನು ವಂಚನೆ ಮಾಡುತ್ತಿದ್ದಾರೆ. ಈ ವಿಚಾರ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ನನ್ನ ಕ್ಷೇತ್ರದ ಹರೇಕಳ ಗ್ರಾಮದ 4 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ವಂಚನೆ ಆಗಿರುವುದನ್ನು ನಾನು ಜಿಲ್ಲಾಪರಿಷತ್ತು ಮತ್ತು ಸರ್ಕಾರಕ್ಕೆ ಕೂಡ ತಿಳಿಸಿದ್ದೇನೆ. ಅದರ ಬಗ್ಗೆ ತಾವು ಯಾವ ಕ್ರಮ ತೆಗೆದುಕೊಂಡಿದ್ದೀರಿ? ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ದೇವಸ್ಥಾನಗಳಿಗೆ ಮತ್ತು ಮನೆಗಳಿಗೆ ಪ್ರವೇಶಗಳನ್ನು ನಿಷೇಧ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ರಮದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ರಾಮಕೃಷ್ಣ ಪ್ರೌಢಶಾಲೆಗೆ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಸೇರ್ಪಡೆಗೆ ಸಂಬಂಧಿಸಿದಂತೆ ಸರ್ಕಾರದಲ್ಲಿ ಅಂಕಿಅಂಶಗಳು ಇವೆಯೇ? ಇದ್ದಲ್ಲಿ ಆ ವಿವರಣಗಳನ್ನು ಕೊಡಬೇಕೆದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸನ್ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಏನೇನು ಯೋಜನೆಗಳು ಇವೆ ಎಂದು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟು ಕಳುಹಿಸಿದ್ದೇನೆ. ಮತ್ತು ವಿದ್ಯಾರ್ಥಿಗಳಿಗೆ ಇಲ್ಲಿಯವರೆಗೆ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡುತ್ತೀರಿ ಎಂದು ಉಪಪ್ರಶ್ನೆಯನ್ನು ಕೇಳಿದ್ದಾರೆ, ನಾವು ಇಲ್ಲಿಯವರೆಗೆ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಕೊಟ್ಟಿದ್ದೇವೆ ಎನ್ನುವ ಅಂಕಿಅಂಶಗಳನ್ನು ಸದ್ಯದಲ್ಲಿಯೇ ಬರೆದು ಮಾನ್ಯ ಸದಸ್ಯರಿಗೆ ಕೊಟ್ಟು ಕಳುಹಿಸುತ್ತೇನೆ. ದೇವಸ್ಥಾನಗಳಿಗೆ ಪ್ರವೇಶವಿಲ್ಲ ಎಂದು ಹೇಳುವವರು ಇದ್ದಾರೆಯೇ! ರಾಮಕೃಷ್ಣ ಆಶ್ರಮದಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಕ್ಕಳಿಗೆ ಪ್ರವೇಶಾವಕಾಶ ನೀಡಲಾಗಿದೆ ಎಂದು ಕೇಳುತ್ತಾರೆ. ಇವುಗಳಿಗೆಲ್ಲಾ ಬೇರೆ ಪ್ರಶ್ನೆಯನ್ನು ಕಳುಹಿಸಿಕೊಟ್ಟರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಅಂಬೇಡ್ಕರ್ ವಸತಿಯೋಜನೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಾ ಇದ್ದೇನೆ. ಉಳ್ಳಾಲ ವಿಧಾನಸಭಾ ಕ್ಷೇತ್ರದ ಹರೇಕಳ ಗ್ರಾಮದಲ್ಲಿ ೪ ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಟ್ಟಿಕೊಟ್ಟಿರತಕ್ಕಂಥ ಮನೆಯಲ್ಲಿ ಅವ್ಯವಹಾರವಾಗಿದೆ ಈ ಬಗ್ಗೆ ನಾನು ಲಿಖಿತ ಮುಖಾಂತರ ಸರ್ಕಾರಕ್ಕೆ ತಿಳಿಸಿರುತ್ತೇನೆ.

ಅಧ್ಯಕ್ಷರು : ಜಯರಾಮ ಶೆಟ್ಟರೇ, ಒಂದು ಪ್ರಶ್ನೆಯನ್ನು ಕೇಳುವಾಗ ಆ ಪ್ರಶ್ನೆ ಯಾವ ಇಲಾಖೆಗೆ ಬರುತ್ತದೆ, ಎಂದು ನೋಡಿ, ಇಂತಹ ದಿವಸ ಇಂತಹ ಇಲಾಖೆ ಉತ್ತರ ಕೊಡಬೇಕೆಂದು ನಿಗದಿ

ಮಾಡಿರುತ್ತಾರೆ. ಆ ವ್ಯಾಪ್ತಿಯೊಳಗೆ ನೀವು ಪ್ರಶ್ನೆ ಕೇಳಬೇಕಾಗುತ್ತದೆ. ಪ್ರಶ್ನೆಯನ್ನು ಕೇಳುವಾಗ ಸಂಬಂಧಪಟ್ಟ ಇಲಾಖೆಯ ವ್ಯಾಪ್ತಿಯನ್ನು ಮೀರಿ ಬೇರೆ ಉಪ ಪ್ರಶ್ನೆಯನ್ನು ಕೇಳಿದಾಗ ಸಚಿವರು ಎಲ್ಲಾ ಉತ್ತರಗಳನ್ನು ಇಟ್ಟುಕೊಂಡಿರುವುದಿಲ್ಲ. ಈಗ ನೀವು ಅನಟಚ್‌ಬಿಲಿಟಿ ಪ್ರಶ್ನೆ ಕೇಳಿದಿರಿ. ಅನಂತರ ಅಂಬೇಡ್ಕರ್ ಯೋಜನೆಯಡಿಯಲ್ಲಿ ನಿರ್ಮಿಸುವ ಮನೆಗಳ ಬಗ್ಗೆ ಕೇಳಿದಿರಿ. ಅದು ಹೌಸಿಂಗ್ ಮಿನಿಸ್ಟರ್‌ಗೆ ಬರುತ್ತದೆ. ಅದನ್ನು ಅವರು ಹೇಳಬೇಕಾಗುತ್ತದೆ.

ಶ್ರೀ ಕೆ. ಜಯರಾಮ ಶೆಟ್ಟಿ : ನನ್ನ 2 ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಉದ್ಭವಿಸುವಂಥ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ನಾನೂ ಕೂಡ ಅದನ್ನೇ ಹೇಳುತ್ತಿರುವುದು. ಅವರು, ನಾವು ಯಾರೂ ಸಹ ಯೋಚನೆ ಮಾಡುವುದಿಲ್ಲ. ಅಂಬೇಡ್ಕರ್ ವಸತಿ ಯೋಜನೆ ಏನು ಇದೆ ಅದಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಹೌಸಿಂಗ್ ಇಲಾಖೆಗೆ ಹಣವನ್ನು ಬಿಡುಗಡೆ ಮಾಡುತ್ತಾರೆ. ವಸತಿಯೋಜನೆಯ ಕಾರ್ಯನಿರ್ವಹಣೆಯನ್ನು ಹೌಸಿಂಗನವರೇ ನಿರ್ವಹಿಸುತ್ತಾರೆ. ಆದ್ದರಿಂದ ವಸತಿ ಬಗ್ಗೆ ಹೌಸಿಂಗನವರು ಉತ್ತರ ಕೊಡಬೇಕಾಗುತ್ತದೆ. ಆ ನಂತರ ಈ ಸೈಕ್ಲೋಸ್ಟೈಲ್ಡ್ ಆನ್ಸರ್ ಕಳುಹಿಸಿಕೊಡುತ್ತೀರಲ್ಲಾ, ನಿಮ್ಮ ಕಛೇರಿಯಲ್ಲಿ ಸೈಕ್ಲೋಸ್ಟೈಲ್ ಮೆಶಿನ್ ಕೆಟ್ಟುಹೋಗಿದ್ದರೆ ಬೇರೆ ಯಂತ್ರವನ್ನು ತರಿಸಿಕೊಳ್ಳಿ. 42 ಲಕ್ಷ ಎಂದು ಇದ್ದರೆ 12 ಲಕ್ಷ ಎಂದು ಪ್ರಿಂಟ್ ಆಗಿದೆ. ನಿನ್ನೆ ಕೂಡ ಹಾಗೆಯೇ ಪ್ರಿಂಟ್ ಆಗಿತ್ತು. ನಾವು ಕನ್ನಡಕಹಾಕಿಕೊಂಡು ಓದುವುದಕ್ಕೆ ಪ್ರಯತ್ನ ಪಟ್ಟರೂ ಸಹ ಕಷ್ಟವಾಗುತ್ತದೆ. ಆದ್ದರಿಂದ ಬೇರೆ ವ್ಯವಸ್ಥೆ ಮಾಡಿ. ನಮಗೆ ಓದುವುದಕ್ಕೆ ಆಗುವ ರೀತಿಯಲ್ಲಿ ಸೈಕ್ಲೋಸ್ಟೈಲ್ ಮಾಡಿ ಉತ್ತರವನ್ನು ಕಳುಹಿಸಿಕೊಡಿ.

ಶ್ರೀ ಕೆ. ಜಯರಾಮ ಶೆಟ್ಟಿ : ಅಧಿಕಾರಿಗಳ ಅವ್ಯವಹಾರದ ಬಗ್ಗೆ ಸರ್ಕಾರಕ್ಕೆ ಲಿಖಿತವಾಗಿ ದಾಖಲೆ ಸಹಿತ ಕೊಟ್ಟಿದ್ದರ ಬಗ್ಗೆ ಕ್ರಮ ತೆಗೆದುಕೊಳ್ಳುವರೇ?

ಅಧ್ಯಕ್ಷರು : ಕ್ರಮ ತೆಗೆದುಕೊಳ್ಳಲೇ ಬೇಕು. ನೀವು ಏಕೆ ಅನುಮಾನವಾಗಿ ಕೇಳುತ್ತೀರಿ? ಮಾನ್ಯ ಸದಸ್ಯರು ನಿರ್ದಿಷ್ಟವಾದ ಪ್ರಕರಣವನ್ನು ತಮ್ಮ ಗಮನಕ್ಕೆ ತಂದರೆ ಸಚಿವರಾದ ತಾವು ಅಗತ್ಯ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಕೇಂದ್ರ ಸರ್ಕಾರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಎಷ್ಟು ಹಣ ಬಿಡುಗಡೆಯಾಗಿದೆ? ಇದರಲ್ಲಿ ಎಷ್ಟು ಹಣವನ್ನು ಸರ್ಕಾರ ಖರ್ಚುಮಾಡಿದೆ? ಒಂದು ವೇಲೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಹಣವನ್ನು ಖರ್ಚು ಮಾಡದಿದ್ದಲ್ಲಿ, ಏಕೆ ಖರ್ಚು ಮಾಡಲಿಲ್ಲವೆಂಬುದನ್ನು ತಿಳಿಸುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಅಷ್ಟೂ ಹಣವನ್ನು

ನಾವು ಖರ್ಚು ಮಾಡಿದ್ದೇವೆ. ಆ ನಂತರ ಚುನಾವಣೆ ಬಂದುದರಿಂದ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಿ, ಪುನಃ ಮಾರ್ಚ್‌ನಿಂದ ಮೂರು ತಿಂಗಳವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಿಡುಗಡೆ ಮಾಡಿದ ಹಣವನ್ನು ಖರ್ಚು ಮಾಡುವ ಸಲುವಾಗಿ ಸಮಯವನ್ನು ಮಾನ್ಯ ಮುಖ್ಯಮಂತ್ರಿಗಳ ನಿಗದಿಪಡಿಸಿದ್ದರು. ಯಾರ ಹಣವೂ ಲ್ಯಾಪ್ಸ ಆಗಿಲ್ಲ. ಹೋದ ವರ್ಷದ ಎಲ್ಲಾ ಹಣವನ್ನು ನಾವು ಖರ್ಚು ಮಾಡಿದ್ದೇವೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಹರಿಜನ ಗಿರಿಜನರ ಪ್ರಗತಿಗೆ ಏನೇನು ಯೋಜನೆಗಳಿವೆ ಎಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ4 ಪುಟ ಹೇಳಿದ್ದೀರಿ. ಇದನ್ನೆಲ್ಲಾ ಯಶಸ್ವಿಯಾಗಿ ನಿರ್ವಹಿಸುವುದಕ್ಕೆ ಪ್ರತಿ ಜಿಲ್ಲೆಯಲ್ಲಿ ಮತ್ತು ಪ್ರತಿ ತಾಲ್ಲೂಕಿನಲ್ಲಿ ಸ್ಟಾಫ್ ಇದೆಯೇ? ಸಮಾಜ ಕಲ್ಯಾಣ ಇಲಾಖೆಯ ವರದಿಯನ್ನು ನಾನು ಓದಿದೆ. ಆ ವರದಿಯಲ್ಲಿ 46 ತಾಲ್ಲೂಕುಗಳಲ್ಲಿ ಮಾತ್ರ ಸ್ಟಾಫ್ ಇದೆ. ಉಳಿದ ಕಡೆ ಸ್ಟಾಫ್ ಇಲ್ಲ. ಅದಕ್ಕೋಸ್ಕರ ನಿಗದಿತ ಮಾರ್ಗದಲ್ಲಿ ಕಾರ್ಯ ನಡೆಯುತ್ತಾ ಇಲ್ಲವೆಂದು ಆ ವರದಿಯಲ್ಲಿ ಬಂದಿದೆ. ಇದು ನಿಜವೇ? ಒಂದು ವೇಳೆ ನಿಜವಾದ ಪಕ್ಷದಲ್ಲಿ ಯಾವಾಗ ಇದಕ್ಕೆಲ್ಲಾ ಸ್ಟಾಫ್ ರೆಡಿ ಮಾಡುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ನಮಗೆ ಸ್ವಾತಂತ್ರ್ಯ ಸಿಕ್ಕು ಸುಮಾರು 50 ವರ್ಷ.ಗಳಾದರೂ ಕೂಡ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೇವಲ 43 ತಾಲ್ಲೂಕುಗಳಲ್ಲಿ ಕಛೇರಿಗಳು ಇದ್ದದ್ದು ನಿಜ. ಆದರೆ, ಅದಕ್ಕೆ ನಾವು ಹೊಣೆಗಾರರು ಅಲ್ಲ. ಹಿಂದೆ ಮಾನ್ಯ ರಾಮಕೃಷ್ಣರವರೂ ಸಹ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. ಅವರು ಹಿರಿಯರು ಕೂಡ ಆಗಿದ್ದಾರೆ. ಆವಾಗ ಎಲಲರೂ ಯೋಚನೆ ಮಾಡಬೇಕಾಗಿತ್ತು. ಇದೆಲ್ಲವನ್ನು ನಾವು ಗಮನದಲ್ಲಿಟ್ಟುಕೊಡು ಸದ್ಯಕ್ಕೆ100ತಾಲ್ಲೂಕುಗಳಲ್ಲಿ ಕಛೇರಿಗಳನ್ನು ತೆರೆಯಬೇಕೆಂದು ನಿರ್ಣಯ ಮಾಡಿದ್ದೇವೆ. ಇನ್ನು 2 ದಿವಸಗಳಲ್ಲಿ 100 ಹೊಸ ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಆಫೀಸಗಳನ್ನು ಪ್ರಾರಂಭಿಸುವುದಕ್ಕೆ ಸರ್ಕಾರಿ ಆಜ್ಞೆ ಹೊರಡಿಸುತ್ತೇವೆ.

ಶ್ರೀ ವೈ. ರಾಮಕೃಷ್ಣ : ಇದಕ್ಕೆ ಈಗ ನಿಮ್ಮನ್ನು ಹೊಣೆಗಾರರನ್ನಾಗಿ ಮಾಡುತ್ತಿಲ್ಲ. ವಾಸ್ತವಾಂಶ ಹೇಳಿಅಷ್ಟೆ. 2ನೆಯದು ಎಂದರೆ ಇದರಲ್ಲಿ ಆರ್ಥಿಕ ಪ್ರಗತಿ ಮತ್ತು ವಸತಿ ಬಗ್ಗೆ ಹೇಳಿದ್ದೀರಿ. ಅಸ್ಪೃಶ್ಯತಾ ನಿವಾರಣೆಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ದಯವಿಟ್ಟು ಅದನ್ನು ಸ್ವಲ್ಪ ಹೇಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಅಸ್ಪೃಶ್ಯತೆ ಬಗ್ಗೆ ಮಾನ್ಯ ಸದಸ್ಯರಾದ ಕೆ. ಜಯರಾಮ ಶೆಟ್ಟರು ಕೂಡ ಉಪ ಪ್ರಶ್ನೆಯನ್ನು ಕೇಳಿದರು. ಅಸ್ಪೃಶ್ಯತೆ ಬ್ಗಗೆ 'ಅಸ್ಪೃಶ್ಯತಾ ವಾರ' ಎಂದು ಆಚರಣೆ ಮಾಡಬೇಕೆಂದು ನಿಗದಿ ಮಾಡಿದ್ದೇವೆ. ಕೆಲವೊಂದು ತಾಲ್ಲೂಕುಗಳಿಗೆ ಸ್ವಲ್ಪ ಹಣವನ್ನು ಕಳುಹಿಸಬೇಕಾಗಿದೆ. ಆ ಕ್ಷೇತ್ರದ ಶಾಸಕರು ಅದಕ್ಕೆ ಮುಂದಾಳತ್ವ ವಹಿಸಬೇಕೆಂದು ಇದೆಲ್ಲವನ್ನು ನಾವು ಮಾಡುತ್ತಿದ್ದೇರೆ. ಆದರೆ ಇಡೀ ಸಮಾಜದಲ್ಲಿರತಕ್ಕಂಥ ಅಸ್ಪೃಶ್ಯತೆ ಎಲ್ಲವೂ ಹೋಗಿದೆಯೆಂದು ನಾನು ಹೇಳುವುದಿಲ್ಲ. ಅಸ್ಪೃಶ್ಯತೆ ಹೋಗಲಿಕ್ಕೆ ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದೆಲ್ಲವನ್ನು ನಾವು ಇನ್ನೂ ಕೂಡ ಹಾಕಿಕೊಳ್ಳುತ್ತೇವೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆ ಬಗ್ಗೆ ಅಲ್ಲ. ನನಗೆ ಬಂದಿರುವಂತಹ ಸಮಸ್ಯೆಗೆ ತಾವು ರಕ್ಷಣೆಗೆ ಬರಬೇಕು ಎನ್ನುವ ದೃಷ್ಟಿಯಿಂದ ಕೇಳುತ್ತಿದ್ದೇನೆ. ಸನ್ಮಾನ್ಯ ಜಯರಾಮ ಶೆಟ್ಟಿ ದಾಖಲಾತಿ ಸಮೇತ ನಿಮಗೆ ಕೊಟ್ಟರೆ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ . ನಾನು ಈ ಪ್ರಶ್ನೆ ದಾಖಲಾತಿ ಸಮೇತ ಒಬ್ಬ ವೈದ್ಯರ ಬಗ್ಗೆ. ದಾಖಲಾತಿಗಳನ್ನು ತಿದ್ದಿದ್ದಾರೋ, ಟೆಂಡೆನ್ಸ್ ತಿದ್ದಿದ್ದಾರೋ? ತಿದ್ದಿದ್ದಾರೆ. ಅವರು ರಜಕ್ಕೆ ಅರ್ಜಿ ಹಾಕಿದ್ದಾರಾ? ಅರ್ಜಿ ಮೂರು ಮೂ ತಿಂಗಳು ಹಾಕಿಯೇ ಇಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದರೆ ಇಷ್ಟೆಲ್ಲಾ ಆಗಿ ಯದು ಹೌದು. ಇನ್ನು ಮುಂದೆ ಈ ರೀತಿ ಮಾಡಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಉತ್ತರ ಬಂ ದೆ. ರೈಟಿಂಗನಲ್ಲಿ ಉತ್ತರ ಬಂದಿದೆ. ಈ ರೀತಿ ಆಗದೇ ಇರುವ ಹಾಗೆ ತಾವೇನಾದರೂ ನಮ್ಮ ರಕ್ಷಣೆಗೆ ಬರುತ್ತೀರೋ ಎಂದು ನಾನು ನಿಮಗೆ ಪ್ರಶ್ನೆ ಕೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು : ಎಲ್ಲೆಲ್ಲಿ ರಕ್ಷಣೆಗೆ ಬರಲು ಸಾಧ್ಯವಾಗುತ್ತದೆ ಅಲ್ಲೆಲ್ಲಾ ನಾನು ಇದ್ದೇನಲ್ಲ! ನಾನೇ ನಿಮಗೆ ರಕ್ಷಣೆ, ನನಗೆ ನೀವು ರಕ್ಷಣೆ.

ತೀರ್ಥಹಳ್ಳಿ ನಗರಕ್ಕೆ ನೀರು ಸರಬರಾಜು ಮಂಡಳಿಯಿಂದ ಪೂರೈಕೆಯಾದ ಮೋಟಾರನ್ನು ಅಳವಡಿಸಲು ವಿಳಂಬ.

63 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ನಗರಕ್ಕೆ ನೀರು ಸರಬರಾಜು ಮಾಡುವ 60 ಅಶ್ವಶಕ್ತಿಯ ಮೋಟಾರು ಕೊಂಡಕೊಳ್ಳುವ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳು ಬರ ಕಾಮಗಾರಿ ಹಣದಲ್ಲಿ ಶಿವಮೊಗ್ಗದಲ್ಲಿ ಮತ್ತು ಒಳಚರಂಡಿ ಮಂಡಳಿಯವರಿಗೆ ಹಣ ಬಿಡುಗಡೆ ಮಾಡಿದ್ದು ಯಾವಾಗ?

ಆ) ಈ ಬಗ್ಗೆ ಶಿವಮೊಗ್ಗ ನಗರ ನೀರು ಸರಬರಾಜು ಮಂಡಳಿಯವರು ಮೋಟಾರು ಕೊಂಡು ತೀರ್ಥಹಳ್ಳಿಗೆ ತಂದಿಟ್ಟು ಎಷ್ಟು ಸಮಯವಾಗಿದೆ.

ಇ) ಯಾವ ಕಾರಣಕ್ಕಾಗಿ ಇದನ್ನು ಜೋಡಿಸಲು ವಿಳಂಬವಾಗಿದೆ?

ಈ) ಇದನ್ನು ಯಾವಾಗ ಜೋಡಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ತೀರ್ಥಹಳ್ಳಿ ನಗರಕ್ಕೆ ನೀರು ಮಾಡಲು 60 ಅಶ್ವ ಶಕ್ತಿಯ ಮೋಟಾರು ಕೊಳ್ಳಲು ಶಿವಮೊಗ್ಗ ಜಿಲ್ಲಾಧಿಕಾರಿಗಳು ಬರಕಾಮಗಾರಿ ಹಣದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ಏಪ್ರಿಲ್ 95ರಲ್ಲಿ ಹಣ ಬಿಡುಗಡೆ ಮಾಡಿರುತ್ತಾರೆ.

ಆ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಸೂಕ್ತ